ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 76-81
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕರ್ನಾಟಕ ಗ್ರಾಮೀಣ ಅಭಿವೃದ್ಧಿಯಲ್ಲಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಪಾತ್ರ : ಒಂದು ಅಧ್ಯಯನ

**ಪ್ರಕಾಶ್.ಡಿ.ಸಿ**
ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

***Abstract:***
*ಭಾರತ ದೇಶದಲ್ಲಿ ವೇದಗಳ ಕಾಲದಿಂದಲೂ ಪಂಚಾಯತ್ ವ್ಯವಸ್ಥೆ ಜಾರಿಯಲ್ಲಿತ್ತು. ಐವರನ್ನೊಳಗೊಂಡ ಗ್ರಾಮ ಪಂಚಾಯತಿಯನ್ನು ಸಭೆ ಎಂದು ಕರೆಯಲಾಗುತ್ತಿತ್ತು. ಮಧ್ಯಕಾಲದಲ್ಲಿ ಗ್ರಾಮ, ಗಣ, ಗಣಸಂಘ, ಸಭಾ, ಸಮಿತಿಗಳೆಂಬ ಹೆಸರುಗಳಿಂದ ಕರೆಯಲಾಗುತಿತ್ತು. ಮನುಸ್ಮೃತಿ, ಮಹಾಭಾರತದ ಶಾಂತಿ ಪರ್ವ, ಕೌಟಿಲ್ಯನ ಅರ್ಥಶಾಸ್ತ್ರ, ವಾಲ್ಮೀಕಿಯ ರಾಮಾಯಣಗಳಲ್ಲಿ ಮತ್ತು ಮೆಗಾಸ್ತನೀಸ್‌ನ ಬರವಣಿಗೆಗಳಲ್ಲಿ ಸ್ಥಳೀಯ ಆಡಳಿತದ ಬೆಳವಣಿಗೆಗಳನ್ನು ನಾವು ಕಾಣಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಕರ್ನಾಟಕ ಗ್ರಾಮೀಣ ಅಭಿವೃದ್ಧಿಯಲ್ಲಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಪಾತ್ರವೇನು ಎಂಬುದನ್ನು ಚರ್ಚಿಸಲಾಗಿದೆ.*

***Keywords:*** *ಪಂಚಾಯತ್ ರಾಜ್, ಗ್ರಾಮೀಣ ಅಭಿವೃದ್ಧಿ, ವಿಕೇಂದ್ರೀಕರಣ, ಪ್ರಜಾಸತ್ತಾತ್ಮಕತೆ.*

## ಪೀಠಿಕೆ

ಗ್ರಾಮೀಣಾಭಿವೃದ್ಧಿ ಎಂದರೆ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ ಮೊದಲಾದ ಪ್ರಗತಿಯನ್ನು ಸಾಧಿಸುವುದು ಎಂದರ್ಥ. ಸ್ವಾತಂತ್ರ್ಯಪೂರ್ವದಲ್ಲಿ 'ಪಂಚಾಯತ್ ರಾಜ್ ಅಥವಾ ಸ್ಥಳೀಯ ಸರ್ಕಾರ ಪರಿಕಲ್ಪನೆಯನ್ನು ದೇಶಕ್ಕೆ ಪರಿಚಯಿಸಿದ ಕೀರ್ತಿ ಬ್ರಿಟಿಷ್ ಆಡಳಿತಾಧಿಕಾರಿಯಾದ ಲಾರ್ಡ್‌ರಿಪ್ಪನ್‌ಗೆ ಸಲ್ಲುತ್ತದೆ. ಗಾಂಧೀಜಿಯವರು ಗ್ರಾಮ ಅಭಿವೃದ್ಧಿಯಾಗದ ಹೊರತು ದೇಶ ಅಭಿವೃದ್ಧಿಯಾಗದು ಎಂದು ನಂಬಿದ್ದರು. ಗಾಂಧೀಜಿಯವರ ಈ ತತ್ವದ ಅಡಿಯಲ್ಲಿಯೇ ನೆಹರು ಸರ್ಕಾರ ಸ್ಥಳೀಯ ಸರ್ಕಾರದ ವ್ಯವಸ್ಥೆಯನ್ನು ಸಮಗ್ರವಾಗಿ ಜಾರಿಗೊಳಿಸಿ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಯೋಜನೆ ರೂಪಿಸಿತು. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮೂರು ಹಂತದ ವ್ಯವಸ್ಥೆಯನ್ನು ಕಾಣಬಹುದಾಗಿದೆ. ಗ್ರಾಮ ಮಟ್ಟದಲ್ಲಿ ಗ್ರಾಮಪಂಚಾಯತಿ, ತಾಲೂಕುಮಟ್ಟದಲ್ಲಿ ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿ ಇರುತ್ತದೆ.

ಕರ್ನಾಟಕ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕಾರ ಹೊಸ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಿರುವುದು ರಾಜಕೀಯ ಕ್ಷೇತ್ರದಲ್ಲಿ ಸಾಧನೆ ಮತ್ತು ಗ್ರಾಮ ಪಂಚಾಯತಿ ವ್ಯವಸ್ಥೆಯ ಮುಖ್ಯ ಹಂತವಾಗಿದ್ದು ಇದನ್ನು ವಿಕೇಂದ್ರೀಕರಣ ವ್ಯವಸ್ಥೆಯ ಅಡಿಗಲ್ಲು ಅಥವಾ ಹೃದಯ ಎಂದು ಪರಿಗಣಿಸಲಾಗಿದೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮಸಭೆಯ ನಂತರ ಗ್ರಾಮಪಂಚಾಯತಿ ಕೂಡ ಸ್ಥಳೀಯ ಸರ್ಕಾರದ ಮೂಲಕ ಆಡಳಿತಾತ್ಮಕ ಘಟಕವಾಗಿದೆ. ಗ್ರಾಮಸಭೆ

***Please cite this article as:*** ಸೋಮಲತ, ಕೆ.ಸಿ. (2023). ಆರಂಭಿಕ ಬಾಲ್ಯ ಶಿಕ್ಷಣದ ಪಠ್ಯಕ್ರಮ ಮತ್ತು ಬೋಧನಾ ವಿಧಾನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(4), 76–81.

ಮತ್ತು ಗ್ರಾಮ ಪಂಚಾಯತ್, ಪಂಚಾಯತ್‌ರಾಜ್ ವ್ಯವಸ್ಥೆಯ ಜೀವಾಳವಾಗಿದೆ. ಗ್ರಾಮಸಭೆ ಮತ್ತು ಗ್ರಾಮ ಪಂಚಾಯತಿ ಪರಸ್ಪರ ಸಹಕಾರ ಸಮಾನತೆ ಜವಬ್ದಾರಿಯಿಂದ ಕೆಲಸ ಮಾಡುವುದು ಅವಶ್ಯಕವಾಗಿರುತ್ತದೆ. ಇಲ್ಲದಿದ್ದರೆ ಪಂಚಾಯತ್ ರಾಜ್ ಸದೃಢವಾಗಿರುವುದಿಲ್ಲ.

**ಅಧ್ಯಯನದ ಉದ್ದೇಶಗಳು**

- ಪಂಚಾಯತ್‌ರಾಜ್ ಇತಿಹಾಸವನ್ನು ಅಧ್ಯಯನ ಮಾಡುವುದು.
- ಗ್ರಾಮೀಣ ಅಭಿವೃದ್ಧಿಯಲ್ಲಿ ವಿಕೇಂದ್ರೀಕರಣದ ಪಾತ್ರವನ್ನು ತಿಳಿಯುವುದು.
- ಗ್ರಾಮೀಣ ಪ್ರದೇಶದ ಹಿಂದುಳಿದಿರುವಿಕೆಗೆ ಕಾರಣಗಳನ್ನು ಅಧ್ಯಯನ ಮಾಡುವುದು.

**ಮಾಹಿತಿ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ದಾಖಲೆಗಳು, ಬರೆಹಗಳು, ಸಾಕ್ಷ್ಯಾಧಾರಗಳು, ದಸ್ತಾವೇಜಿನ ಮೂಲಗಳಾದ ದಿನಚರಿಗಳು, ಗ್ರಂಥಗಳು, ಕೈಪಿಡಿಗಳು, ಸಂಯೋಜಿತ ವರದಿಗಳು, ಸಂಶೋಧನಾ ಲೇಖನಗಳು, ದಿನಪತ್ರಿಕೆ ಲೇಖನಗಳು, ವಾರ್ತಾಪತ್ರಿಕೆಗಳು, ಹಸ್ತಪ್ರತಿಗಳು, ಮಸ್ತಕಗಳು ಹಾಗೂ ಸರ್ಕಾರಿ ಇಲಾಖೆಗಳು ಪ್ರಕಟಿಸುವ ಯೋಜನಾ ಪರಿಚಯ ಮಸ್ತಕಗಳು ಹಾಗೂ ಕಾರ್ಯ ಸೂಚಿಗಳಿಂದ ಮತ್ತು ಇಲಾಖೆಗೆ ಸಂಬಂಧಿಸಿದ ವ್ಯಕ್ತಿಗಳು ಹಾಗೂ ಅಂತರ್ಜಾಲದಲ್ಲಿ ದೊರೆಯುವ ವಿಷಯಗಳಿಂದ ಮಾಹಿತಿಯನ್ನು ಪಡೆಯಲಾಗಿದೆ.

**ವಿಕೇಂದ್ರೀಕರಣ ವ್ಯವಸ್ಥೆಯ ಹಿನ್ನೆಲೆ**

**1957ರಲ್ಲಿ ಜಸ್ಟೀಸ್ ಬಲವಂತರಾಯ್ ಮೆಹ್ತಾ ಸಮಿತಿ**

ಬಲವಂತ್ ರಾಯ್ ಮೆಹ್ತಾ ಸಮಿತಿಯು ಮೂಲತಃ ಭಾರತ ಸರ್ಕಾರವು 16 ಜನವರಿ 1957 ರಂದು ಸಮುದಾಯ ಅಭಿವೃದ್ಧಿ ಕಾರ್ಯಕ್ರಮ (ಅಕ್ಟೋಬರ್ 2, 1952) ಮತ್ತು ರಾಷ್ಟ್ರೀಯ ವಿಸ್ತರಣೆ ಸೇವೆಯ ಕೆಲಸವನ್ನು ಪರಿಶೀಲಿಸಲು ಮತ್ತು ಅವುಗಳ ಉತ್ತಮ ಕಾರ್ಯಕ್ಕಾಗಿ ಕ್ರಮಗಳನ್ನು ಸೂಚಿಸಲು ನೇಮಿಸಿದ ಸಮಿತಿಯಾಗಿದೆ. ಈ ಸಮಿತಿಯ ಅಧ್ಯಕ್ಷರು ಬಲವಂತರಾಯ್ ಜಿ ಮೆಹ್ತಾ. ಸಮಿತಿಯು 24 ನವೆಂಬರ್ 1957 ರಂದು ತನ್ನ ವರದಿಯನ್ನು ಸಲ್ಲಿಸಿತು ಮತ್ತು ಅಂತಿಮವಾಗಿ ಪಂಚಾಯತ್ ರಾಜ್ ಎಂದು ಕರೆಯಲ್ಪಡುವ 'ಪ್ರಜಾಪ್ರಭುತ್ವದ ವಿಕೇಂದ್ರೀಕರಣ' ವ್ಯವಸ್ಥೆಯನ್ನು ಜಾರಿಗೊಳಿಸಲು ಶಿಫಾರಸ್ಸು ಮಾಡಿತು. ಸ್ಥಳೀಯ ಸಮಸ್ಯೆಗಳನ್ನು ಸ್ಥಳೀಯವಾಗಿ ಇತ್ಯರ್ಥಪಡಿಸುವುದು ಮತ್ತು ಜನರನ್ನು ರಾಜಕೀಯವಾಗಿ ಜಾಗೃತಗೊಳಿಸುವುದು ಪಂಚಾಯತ್ ರಾಜ್ ವ್ಯವಸ್ಥೆಯ ಮುಖ್ಯ ಗುರಿಯಾಗಿದೆ.

**1978 ರಂದು ಅಶೋಕ್ ಮೆಹ್ತಾ ಸಮಿತಿ**

ಮೊರಾರ್ಜಿ ದೇಸಾಯಿಯವರ ಜನತಾ ಸರ್ಕಾರವು ಅಶೋಕ್ ಮೆಹ್ತಾ ಸಮಿತಿಯನ್ನು 1977ರಲ್ಲಿ ರಚಿಸಿತು. ಈ ಸಮಿತಿಯು ಆಗಸ್ಟ್ 1978ರಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಪಡಿಸಲು 132 ಶಿಫಾರಸ್ಸುಗಳನ್ನು ನೀಡಿತ್ತು. ಪಂಚಾಯತ್ ರಾಜ್ ಚುನಾವಣೆಯನ್ನು ಮುಖ್ಯ ಚುನಾವಣಾ ಆಯುಕ್ತರ ಮಾರ್ಗದರ್ಶನದಂತೆ ರಾಜ್ಯ ಮುಖ್ಯ ಚುನಾವಣಾಧಿಕಾರಿ ಪಂಚಾಯತಿ ಚುನಾವಣೆಯನ್ನು ನಡೆಸುವುದು ಎಂದು ಹೇಳಿತು. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆ ನಡೆಸಲು, ಅವಧಿ ಮುಗಿದ 6 ತಿಂಗಳೊಳಗೆ ಚುನಾವಣೆ ನಡೆಸಬೇಕು ಎಂದು ತಿಳಿಸಿತು.

**1985ರ ಜಿ.ವಿ.ಕೆ ರಾವ್ ಸಮಿತಿ**

1985ರಲ್ಲಿ ನೇಮಕವಾದ ಜಿ.ವಿ.ಕೆ.ರಾವ್ ಅವರ ಅಧ್ಯಕ್ಷತೆಯ ಸಮಿತಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಅಧಿಕಾರಿಗಳ ಪಾಲ್ಗೊಳ್ಳುವಿಕೆಯನ್ನು ಕಡಿಮೆಗೊಳಿಸಬೇಕೆಂದು ಪಂಚಾಯತ್ ರಾಜ್ ವ್ಯವಸ್ಥೆ

ದುರ್ಬಲಗೊಂಡಿರುವುದನ್ನು ಪ್ರಸ್ತಾಪಿಸಿ ಶಿಫಾರಸ್ಸು ಮಾಡಿತು.

**1986 ಎಲ್.ಎಂ.ಸಿಂಗ್ವಿ ಸಮಿತಿಯು**

ಪಂಚಾಯತ್ ರಾಜ್ ಬಗ್ಗೆ ಅಧ್ಯಯನ ಮಾಡಲು ಹಾಗೂ ಪುನಶ್ಚೇತನಗೊಳಿಸಲು ಎಲ್.ಎಂ.ಸಿಂಗ್ವಿ ಸಮಿತಿ ನೇತೃತ್ವದಲ್ಲಿ ರಾಜೀವ್ ಗಾಂಧಿ ಸರ್ಕಾರವು 1986ರಲ್ಲಿ ರಚಿಸಿತು. ಈ ಸಮಿತಿಯು ಪಂಚಾಯತ್ ರಾಜ್ ಸಂಸ್ಥೆಗಳನ್ನು ಸಂವಿಧಾನವು ಗುರುತಿಸಿ ಅದನ್ನು ಸಂರಕ್ಷಿಸಲು ಅವಕಾಶ ಕಲ್ಪಿಸಬೇಕು ಎಂದು ಸೂಚಿಸಿತು ಮತ್ತು ಸಂವಿಧಾನವು ಮುಕ್ತವಾದ ಹಾಗೂ ನ್ಯಾಯಯುತವಾದ ಚುನಾವಣೆಗಳನ್ನು ನಡೆಸಲು ಅವಕಾಶ ಕಲ್ಪಿಸಬೇಕು ಮತ್ತು ಸಂವಿಧಾನದಲ್ಲಿ ಹೊಸ ಅಧ್ಯಯನವನ್ನು ಪ್ರಾರಂಭಿಸಬೇಕು ಎಂದು ಶಿಫಾರಸ್ಸು ಮಾಡಿತು.

ಭಾರತದಲ್ಲಿ ಗ್ರಾಮ ಪಂಚಾಯತಿಯನ್ನು ಸಂವಿಧಾನಾತ್ಮಕವಾಗಿ ಸ್ಥಾಪಿಸಲು 73ನೇ ತಿದ್ದುಪಡಿಯನ್ನು 1992ರಲ್ಲಿ ಮಾಡಲಾಯಿತು. ಈ ತಿದ್ದುಪಡಿಯನ್ನು "ದಿ ಪಂಚಾಯತ್" ಎಂಬ ಶೀರ್ಷಿಕೆ ಅಡಿಯಲ್ಲಿ ತಿದ್ದುಪಡಿ ಮಾಡಲಾಯಿತು. ಈ ಪದ್ಧತಿಯನ್ನು ಏಪ್ರಿಲ್ 20, 1999 ರಿಂದ ಜಾರಿಗೊಳಿಸಲಾಯಿತು. ಪಂಚಾಯತ್ ರಾಜ್ ರಚನೆಗೆ ಸಂಬಂಧಿಸಿದ 73ನೇ ತಿದ್ದುಪಡಿ ಮಾಡಿ ಸಂವಿಧಾನದ 9ನೇ ಭಾಗಕ್ಕೆ ಸೇರಿಸಲಾಯಿತು. ಇದರನ್ವಯ ಭಾರತ ದೇಶದಲ್ಲಿ ಗ್ರಾಮಪಂಚಾಯತಿಯು ಜಾರಿಗೆ ಬಂದಿತು.

**ಗ್ರಾಮೀಣಾಭಿವೃದ್ಧಿಗೆ ಪ್ರಜಾಸತ್ಮಕ ವಿಕೇಂದ್ರೀಕರಣ ವ್ಯವಸ್ಥೆ ನೀಡಿರುವ ಕೊಡುಗೆಗಳು**

ಆಡಳಿತದ ಅನುಕೂಲಕ್ಕಾಗಿ ಮತ್ತು ಆಡಳಿದ ಬಲಿಷ್ಟತೆಗಾಗಿ ರಾಷ್ಟ್ರದ ಆಡಳಿತದಲ್ಲಿ ಅಧಿಕಾರ ವಿಭಜನೆ ಅಥವಾ ವಿಕೇಂದ್ರೀಕರಣವಾಗಬೇಕು. ಇದ್ದರಿಂದ ಸ್ಥಳೀಯ ಮಟ್ಟದಲ್ಲಿ ಸಮಸ್ಯೆಗಳನ್ನು ನಿವಾರಿಸಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಸಹಕಾರಿಯಾಗುತ್ತದೆ. ವಿಕೇಂದ್ರೀಕರಣದಿಂದ ಅನೇಕ ಅನುಕೂಲಗಳಾಗಿವೆ. ಪ್ರಮುಖವಾದವುಗಳನ್ನು ಇಲ್ಲಿ ವಿವರಿಸಲಾಗಿದೆ.

**ಜನವಸತಿ ಸಭೆ**

ವಿಕೇಂದ್ರೀಕರಣದ ಫಲವಾಗಿ ಜನವಸತಿ ಸಭೆ, ವಾರ್ಡ್‌ಸಭೆ ಮತ್ತು ಗ್ರಾಮಸಭೆಯನ್ನು ನಡೆಸಲಾಗುತ್ತದೆ. 100 ರಿಂದ 350 ಜನರಿರುವ ವಸತಿ ಪ್ರದೇಶ ಅಥವ ಗ್ರಾಮಗಳಲ್ಲಿ ಕನಿಷ್ಠ 6 ತಿಂಗಳಿಗೊಮ್ಮೆ ಹಾಗೂ ಗ್ರಾಮಸಭೆ ನಡೆಯುವ ಒಂದು ತಿಂಗಳಿಗಿಂತ ಮುಂಚೆ ಜನವಸತಿ ಸಭೆಯನ್ನು ನಡೆಸಬೇಕಾಗುತ್ತದೆ. ಈ ಸಭೆಯ ಪ್ರಮುಖ ಉದ್ದೇಶ ದುರ್ಬಲ ಅಥವಾ ಬದಿಗೊತ್ತಲ್ಪಟ್ಟ ಅಥವಾ ಅಸುರಕ್ಷಿತ ವರ್ಗದವರ ಸಮಸ್ಯೆಗಳನ್ನು ಆಲಿಸಿ ಅವರಿಗೆ ಸಾಮಾಜಿಕನ್ಯಾಯ ಒದಗಿಸುವುದು ಹಾಗೂ ರಾಜಕೀಯ ಭಾಗವಹಿಸುವಿಕೆ ಹಾಗೂ ಪ್ರಜಾಪ್ರಭುತ್ವದ ಬಗ್ಗೆ ಅರಿವುದು ಮೂಢಿಸುವುದು ಮುಖ್ಯವಾಗಿರುತ್ತದೆ.

**ಗ್ರಾಮಾಡಳಿತ ಸ್ಥಾಪನೆ**

ವಿಕೇಂದ್ರೀಕರಣದ ಕೂಗಿನಿಂದ ಆಡಳಿತದಲ್ಲಿ ನಿರಂಕುಶವಿಲ್ಲದೆ ಪ್ರತಿ ಹಳ್ಳಿಯ ಪ್ರಜೆಗಳು ಜೀವನ ನಿರ್ವಹಣೆಗೆ ಅವಶ್ಯಕವಾಗಿರುವ ವಸ್ತುಗಳು ಸಿಗಬೇಕೆಂಬ ನಿಯಮದಡಿ ಪಂಚಾಯತ್‌ರಾಜ್ ಸ್ಥಾಪನೆಗೆ ಕೇಂದ್ರ ಸರ್ಕಾರ ಬಲವಂತರಾಯ್ ಸಮಿತಿಯ ನೇಮಕ ಮಾಡಿ ಅದು 1958 ರಲ್ಲಿ ನೀಡಿದ ವರದಿಯ ಹಿನ್ನೆಲೆಯಲ್ಲಿ 3 ಸ್ಥರದ ಪಂಚಾಯತ್ ಸ್ಥಾಪನೆಗೆ ಕಾರಣವಾಗುವುದಲ್ಲದೆ ಇಡೀ ದೇಶದ ಅಭಿವೃದ್ಧಿಗೆ ಮುನ್ನುಡಿ ಬರೆದಂತಾಯಿತು. ಜೊತೆಗೆ ಹಳ್ಳಿಗಳ ಬೆಳವಣಿಗೆಗೆ ಕಾರಣವಾಯಿತು.

**ಗ್ರಾಮಸಭೆ**

ಗ್ರಾಮ ಸಭೆಯು ಗ್ರಾಮ ಮಟ್ಟದಲ್ಲಿ ಎಲ್ಲಾ ನಾಗರಿಕರನ್ನು ಒಂದೆಡೆ ಸೇರಿಸಿ ನಡೆಸುವ ಸಾಮಾನ್ಯ ಸಭೆಯಾಗಿದೆ. ಇದು ಗ್ರಾಮ ಪಂಚಾಯಿತಿಯ ವಾರ್ಷಿಕ ಬಜೆಟಿಂಗ್ ಮತ್ತು ಆಡಿಟಿಂಗ್

ವರದಿಗಳನ್ನು ಪರಿಗಣಿಸುವ ಶಾಶ್ವತ ಸಂಸ್ಥೆಯಾಗಿದೆ. ಗ್ರಾಮ ಸಭೆಯು ಸ್ಥಳೀಯ ಆಡಳಿತ ಮತ್ತು ಅಭಿವೃದ್ಧಿಯನ್ನು ನಿಯಂತ್ರಿಸುತ್ತದೆ ಮತ್ತು ಗ್ರಾಮದ ಕಲ್ಯಾಣಕ್ಕಾಗಿ ಅಗತ್ಯ ಆಧಾರಿತ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತದೆ. ಪಾರದರ್ಶಕತೆ ಉದ್ದೇಶಗಳಿಗಾಗಿ ಮತ್ತು ಗ್ರಾಮ ಪಂಚಾಯತಿಗಳ ಉತ್ತಮ ಕಾರ್ಯನಿರ್ವಹಣೆಗೆ ಗ್ರಾಮ ಸಭೆ ಬಹಳ ಮುಖ್ಯವಾಗಿದೆ.

ಗ್ರಾಮಸಭೆಯ ಪ್ರಮುಖ ಕಾರ್ಯಗಳೆಂದರೆ 1. ಗ್ರಾಮ ಪಂಚಾಯತ್‌ನ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಯೋಜನೆಗಳ ಅನುಷ್ಠಾನಕ್ಕೆ ಸಹಾಯ ಮಾಡುವುದು. 2.ವಿವಿಧ ಕಾರ್ಯಕ್ರಮಗಳು ಮತ್ತು ಯೋಜನೆಗಳ ಫಲಾನುಭವಿಗಳನ್ನು ಗುರುತಿಸುವುದು. 3.ಸಾಮೂಹಿಕ ಶಿಕ್ಷಣ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಬೆಂಬಲಿಸುವುದು. 4.ಗ್ರಾಮದಲ್ಲಿ ಸಮಾಜದ ಎಲ್ಲಾ ವರ್ಗಗಳ ನಡುವೆ ಏಕತೆ ಮತ್ತು ಸಾಮರಸ್ಯವನ್ನು ಉತ್ತೇಜಿಸುವುದು. 5.ಜಾಗೃತ ಸಮಿತಿಯ ವರದಿಗಳಿಗೆ ಚರ್ಚಿಸಿ ಸೂಕ್ತ ಕ್ರಮಕ್ಕಾಗಿ ಶಿಫಾರಸ್ಸು ಮಾಡುವುದು ಪ್ರಮುಖವಾದವುಗಳಾಗಿವೆ.

**ಗ್ರಾಮೀಣ ಮಹಿಳೆಯರ ಸಬಲೀಕರಣ**

ವಿಕೇಂದ್ರೀಕರಣದ ವ್ಯವಸ್ಥೆಯಿಂದ ಸ್ಥಳೀಯ ಚುನಾವಣೆಯಲ್ಲಿ ಮಹಿಳೆಯರಿಗೆ 50% ಮೀಸಲಾತಿಯನ್ನು ನೀಡಲಾಗಿದೆ. ಇದರಿಂದಾಗಿ ಮಹಿಳೆಯರು ಕೂಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅನುಕೂಲವಾಗಿದೆ.

**ಗ್ರಾಮೀಣ ಜನರ ವಲಸೆ ನಿಯಂತ್ರಣ**

ವಿಕೇಂದ್ರೀಕರಣದ ವ್ಯವಸ್ಥೆಯಿಂದಾಗಿ ಗ್ರಾಮಪಂಚಾಯತ್ ಮಟ್ಟದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ದುಡಿಯುವ ವ್ಯಕ್ತಿಗೆ ವರ್ಷಕ್ಕೆ 100 ದಿನಗಳ ಕೆಲಸ ನೀಡಬೇಕಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶದ ಜನರ ಜೀವನೋಪಾಯಕ್ಕೆ ಅನುಕೂಲವಾಗಿದ್ದು, ಇದು ಜಾರಿಗೆ ಬಂದ ನಂತರ ಗ್ರಾಮೀಣ ಅಕುಶಲ ಕಾರ್ಮಿಕರು ಒಂದೆಡೆಯಿಂದ ಮತ್ತೊಂದೆಡೆಗೆ ಕೂಲಿ ಅರಸಿ ವಲಸೆ ಹೋಗುವುದು ನಿಯಂತ್ರಣವಾಗಿದೆ. ವಿಕೇಂದ್ರೀಕರಣ ವ್ಯವಸ್ಥೆಯಿಂದಾಗಿ ಇಂತಹ ಮಹತ್ವದ ಯೋಜನೆಗಳು ಜಾರಿಯಾಗಿವೆ.

**ರಾಜಕೀಯ ಸಹಭಾಗಿತ್ವದಲ್ಲಿ ಹೆಚ್ಚಳ**

ವಿಕೇಂದ್ರೀಕರಣದಿಂದಾಗಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರನ್ನೊಳಗೊಂಡಂತೆ ಸ್ಥಳೀಯ ಮಟ್ಟದ ಚುನಾವಣೆಯಲ್ಲಿ ಮತದಾನ, ಚುನಾವಣೆಗೆ ಸ್ಪರ್ಧಿಸುವುದು, ಪಕ್ಷ ಸಂಘಟನೆ, ಮಹಿಳೆಯರಿಗೆ ಮೀಸಲಾತಿ ಮುಂತಾದವುಗಳಿಂದ ಗ್ರಾಮೀಣ ಜನರ ರಾಜಕೀಯ ಸಹಭಾಗಿತ್ವ ಹೆಚ್ಚಿದೆ. ಶೋಷಿತರು, ಹಿಂದುಳಿದವರು, ಮಹಿಳೆಯರು, ಅಲ್ಪಸಂಖ್ಯಾತರು, ಆದಿವಾಸಿಗಳು ಮುಂತಾದ ದುರ್ಬಲ ಸಮುದಾಯದವರಿಗೂ ಕೂಡ ಅಧ್ಯಕ್ಷ, ಉಪಾಧ್ಯಕ್ಷ, ಸ್ಥಾಯಿ ಸಮಿತಿಗಳ ಅಧ್ಯಕ್ಷರು ಹಾಗೂ ಸದಸ್ಯರಾಗುವ ಅವಕಾಶವನ್ನು ವಿಕೇಂದ್ರೀಕರಣ ವ್ಯವಸ್ಥೆ ಜಾರಿಮಾಡಿಕೊಟ್ಟಿದೆ.

**ಗ್ರಾಮೀಣ ಸ್ವಚ್ಛತಾ ಯೋಜನೆಗೆ ಅವಕಾಶ**

ವಿಕೇಂದ್ರೀಕರಣದ ಆಡಳಿತ ವ್ಯವಸ್ಥೆಯಲ್ಲಿ ಕೇಂದ್ರ–ರಾಜ್ಯದ ಜೊತೆಗೆ ಹಳ್ಳಿಗಳ ಆಡಳಿತವು ಚುರುಕುಗೊಂಡಿದ್ದು, ಗ್ರಾಮಾಡಳಿತದ ಮೂಲಕ ಗ್ರಾಮೀಣ ನೈರ್ಮಲ್ಯಕ್ಕೆ ಅನುಕೂಲವಾಗಿದೆ.

**ಗ್ರಾಮಗಳಿಗೆ ಗ್ರಂಥಾಲಯ ಸೌಲಭ್ಯ ಒದಗಿಸುವುದು**

ಗ್ರಂಥಾಲಯಗಳ ಸ್ಥಾಪನೆ ಮತ್ತು ನಿರ್ವಹಣೆ ಗ್ರಂಥಾಲಯದ ಕಟ್ಟಡ ನಿರ್ಮಾಣ ಹಾಗೂ ನಿರ್ವಹಣೆ, ದೇಣಿಗೆ ಸಂಗ್ರಹ, ಪುಸ್ತಕ, ಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಪೂರೈಸುವ ಮೂಲಕ ಗ್ರಾಮೀಣ ಜನರಲ್ಲಿ ದೇಶದ ಪರಿಸ್ಥಿತಿ ಆಗುಹೋಗುಗಳ ಜ್ಞಾನಾರ್ಜನೆ ಮಾಡುವ ಮೂಲಕ ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದೆ.

**ಗ್ರಾಮಗಳಿಗೆ ಹಣಕಾಸಿನ ವಿಕೇಂದ್ರೀಕರಣದ ವ್ಯವಸ್ಥೆ**

ಗ್ರಾಮಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ವಿಶೇಷ ಅನುದಾನವನ್ನು ನೀಡುತ್ತದೆ. ಅನೇಕ ಕಾರ್ಯಕ್ರಮಗಳನ್ನು ಸ್ಥಳೀಯ ಮಟ್ಟದಲ್ಲಿ ಜಾರಿಗೊಳಿಸಿ ಗ್ರಾಮೀಣ ಜನರಿಗೆ ಅವಕಾಶಗಳನ್ನು ಸೃಷ್ಟಿಸುವ ಮೂಲಕ ತಾಂತ್ರಿಕ ತರಬೇತಿ ನಿರ್ವಹಣೆ, ನಾಯಕತ್ವದ ಗುಣಗಳನ್ನು ಬೆಳೆಸುವುದರ ಜೊತೆಗೆ ಗ್ರಾಮ ಮತ್ತು ನಗರಗಳ ನಡುವಿನ ಅಸಮಾನತೆಯನ್ನು ತಗ್ಗಿಸುತ್ತಿದೆ.

**ಗ್ರಾಮೀಣ ಪ್ರದೇಶಗಳ ಹಿಂದುಳಿದಿರುವಿಕೆಗೆ ಕಾರಣಗಳು**

ವಿಕೇಂದ್ರೀಕರಣ ವ್ಯವಸ್ಥೆಯಿಂದ ಅನೇಕ ಅನುಕೂಲಗಳಾಗಿವೆಯಾದರೂ ಕೆಲವು ಕಾರಣಗಳಿಂದ ಇಂದಿಗೂ ಕೂಡ ಪೂರ್ಣ ಪ್ರಮಾಣದದಲ್ಲಿ ಅಭಿವೃದ್ಧಿಯನ್ನು ಸಾಧಿಸಲಾಗಿಲ್ಲ. ಅವುಗಳನ್ನು ಮುಂದಿನ ಪುಟಗಳಲ್ಲಿ ವಿವರಿಸಲಾಗಿದೆ.

**ಭ್ರಷ್ಟಾಚಾರ**

ಪಂಚಾಯತ್ ರಾಜ್ ಇಲಾಖೆಗೆ ಕೇಂದ್ರ–ರಾಜ್ಯ ಸರ್ಕಾರಗಳು ಅನೇಕ ಅನುದಾನಗಳನ್ನು ನೀಡುತ್ತದೆ. ಆದರೆ ಅನುದಾನಗಳ ಅಸರ್ಮಪಕ ಬಳಕೆ ಮತ್ತು ದುರ್ಬಳಕೆ, ಭ್ರಷ್ಟಚಾರದಿಂದಾಗಿ ಪರಿಣಾಮಕಾರಿ ಅಭಿವೃದ್ಧಿ ಸಾಧ್ಯವಾಗಿಲ್ಲ. ಅಧಿಕಾರಿಗಳು ಹಾಗೂ ಸದಸ್ಯರು ತಮ್ಮ ಸಂಬಂಧಿಕರಿಗೆ ಸೌಲಭ್ಯ ಒದಗಿಸುವುದು, ಹಣಕ್ಕೆ ಬೇಡಿಕೆ ಇಡುವುದು, ನಿಜವಾದ ಫಲಾನುಭವಿಗಳಿಗೆ ಸವಲತ್ತು ದೊರೆಯುವಂತೆ ಮಾಡದಿರುವುದು ವಿಕೇಂದ್ರೀಕರಣದ ಆಶಯಗಳನ್ನು ತಲೆಕೆಳಗು ಮಾಡಿದೆ. ಆಡಳಿತದಲ್ಲಿ ಇವತ್ತಿಗೂ ಉತ್ತರದಾಯಿತ್ವ, ಪಾರದರ್ಶಕತೆ ಇಲ್ಲದಿರುವುದನ್ನು ಕಾಣಬಹುದಾಗಿದೆ.

**ಜನರ ಭಾಗವಹಿಸುವಿಕೆಯಲ್ಲಿ ಕೊರತೆ**

ಪಂಚಾಯತ್ ರಾಜ್ ಮೂಲಕ ಪ್ರತಿ ಹಳ್ಳಿಯಲ್ಲಿಯೂ ಜನವಸತಿ ಸಭೆ, ವಾರ್ಡ್‌ಸಭೆ, ಗ್ರಾಮಸಭೆಗಳ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಲು, ಅಭಿವೃದ್ಧಿ ಕೆಲಸವನ್ನು ನಿರ್ಧರಿಸಲು, ಜನರ ಕುಂದು ಕೊರತೆಗಳನ್ನು ಚರ್ಚಿಸಲು ಈ ಸಭೆಗಳು ತುಂಬಾ ಅನುಕೂಲಕಾರಿಯಾಗಿವೆ. ಇದಕ್ಕೆ ಪ್ರೇರಣೆ ವಿಕೇಂದ್ರೀಕರಣದ ವ್ಯವಸ್ಥೆ ಆದರೆ ಅರಿವಿನ ಕೊರತೆ, ಸಭೆ ಮತ್ತು ಸಭೆಯ ಉದ್ದೇಶ ಮತ್ತು ಮಹತ್ವದ ಬಗ್ಗೆ ಹೆಚ್ಚಿನ ಅರಿವು ಮೂಡಿಸದ ಕಾರಣ ಬಹುತೇಕ ಹಳ್ಳಿಗಳಲ್ಲಿ ಈ ಸಭೆಗಳಿಗೆ ಜನರು ಭಾಗವಹಿಸದಿರುವುದನ್ನು ಕಾಣಬಹುದಾಗಿದೆ.

**ನಿರ್ವಹಣೆಯ ಸಮಸ್ಯೆ**

ಪಂಚಾಯತ್ ರಾಜ್ ಅಧಿನಿಯಮವು 1993 ಹಾಗೂ ಸಂವಿಧಾನ ಅನುಸೂಚಿ–11ರ ಪ್ರಕಾರ ಪಂಚಾಯತ್ ರಾಜ್‌ನಲ್ಲಿ ಒಟ್ಟು ಸರಿಸುಮಾರು 28 ಕಾರ್ಯಗಳಿವೆ. ಹಾಗೂ ರಾಜ್ಯ ಸರ್ಕಾರ ಇನ್ನಿತರ ಹೆಚ್ಚಿನ ಕಾರ್ಯಗಳನ್ನು ಪಂಚಾಯತಿಗೆ ವಹಿಸಿರುವ ಹಿನ್ನೆಲೆಯಲ್ಲಿ ಇದನ್ನು ನಿರ್ವಹಿಸುವ ಸಿಬ್ಬಂದಿ ಕೊರತೆ ಒಂದು ಕಡೆಯಾದರೆ ಸರ್ಕಾರದಿಂದ ಬರುವ ಅನುದಾನದ ಕೊರತೆ ಇನ್ನೊಂದೆಡೆ ಆಗಿದೆ.

**ಅಧಿಕಾರದ ದುರ್ಬಳಕೆ**

ಪಂಚಾಯತಿಗಳು ಇರುವುದು ಹಳ್ಳಿ ಹಾಗೂ ಹಿಂದುಳಿದವರನ್ನು ಅಭಿವೃದ್ಧಿಪಡಿಸಲು ಆದರೆ ಸರ್ಕಾರದಿಂದ ಬರುವ ಅನುದಾನಗಳನ್ನು ನಿಜವಾದ ಫಲಾನುಭವಿಗಳಿಗೆ ತಲುಪಿಸಬೇಕಾದ ಅಧಿಕಾರಿಗಳು ಭ್ರಷ್ಟರಾಗಿ ಶ್ರೀಮಂತರ ಅಭಿವೃದ್ಧಿಗೆ ವೆಚ್ಚ ಮಾಡುವ ಮೂಲಕ ಹಾಗೂ ಹಳ್ಳಿ ಜನರಿಗೆ ಸಹಾಯ ಮಾಡಬೇಕಾದ ಅಧಿಕಾರಿಗಳು ಫಲಾನುಭವಿಗಳನ್ನು ಹಲವಾರು ಬಾರಿ ಸುತ್ತಿಸಿ ಮತ್ತೆ ಬಾರದಂತೆ ಮಾಡಿ ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ.

**ರಾಜಕೀಯ ಪಕ್ಷಗಳ ಮಧ್ಯಪ್ರವೇಶ**

ಪಂಚಾಯತಿ ಸದಸ್ಯತ್ವ ಪಕ್ಷಾತೀತವಾಗಿದ್ದು, ಸ್ವತಂತ್ರವಾಗಿ ಆಡಳಿತ ನಡೆಸಬೇಕಾಗಿರುತ್ತದೆ. ಆದರೆ ಆಯ್ಕೆಯಾದ ಸದಸ್ಯರು ವಿವಿಧ ರಾಜಕೀಯ ಪಕ್ಷಗಳಲ್ಲಿ ಗುರುತಿಸಿಕೊಳ್ಳುತ್ತಾರೆ. ಆಡಳಿತ ಪಕ್ಷದ ಸದಸ್ಯರು ಹಾಗೂ ವಿರೋಧ ಪಕ್ಷದ ಸದಸ್ಯರು ಕೂಡ ಪಂಚಾಯಿತಿ ಸದಸ್ಯರು ಮತ್ತು ಅಧಿಕಾರಿಗಳ ಮೇಲೆ ಒತ್ತಡ ತಂದು ತಮಗೆ ಬೇಕಾದವರಿಗೆ ಅನುಕೂಲ

ಮಾಡಿಸಿಕೊಳ್ಳುತ್ತಾರೆ. ಇದರಿಂದಾಗಿ ಗ್ರಾಮೀಣಾಭಿವೃದ್ಧಿ ಸೌಲಭ್ಯಗಳು ಅರ್ಹರಿಗೆ ದೊರೆಯದೆ ಹಿನ್ನಡೆಯಾಗಿದೆ.

**ಅನಕ್ಷರತೆ**

ಹಳ್ಳಿಗಳಲ್ಲಿ ವಿಕೇಂದ್ರೀಕರಣ ವ್ಯವಸ್ಥೆಯ ಅಧಿಕಾರವಿದ್ದರೂ ಪಂಚಾಯತಿಗಳಲ್ಲಿ ಕೇಂದ್ರೀಕೃತ ಅಧಿಕಾರದ ವ್ಯವಸ್ಥೆ ಎದ್ದು ಕಾಣುತ್ತದೆ. ಜೊತೆಗೆ ಅಧಿಕಾರಿಗಳಲ್ಲಿ ನಿರಂಕುಶತೆಯು ಸಹ ಇದ್ದು ಇದಕ್ಕೆಲ್ಲ ಕಾರಣ ಇದರ ವಿರುದ್ಧ ಹೋರಾಡಿ ಇದನ್ನು ಚರ್ಚೆಮಾಡಿ ಸಂಬಂಧಪಟ್ಟ ಮಾಹಿತಿ ಪಡೆಯುವಲ್ಲಿ ಜನರಿಗೆ ಅರಿವಿನ ಕೊರತೆಯಿರುವುದು ಹಾಗೂ ಅನಕ್ಷರತೆ ಪ್ರಮುಖ ಕಾರಣವಾಗಿದೆ.

**ಉಪಸಂಹಾರ**

ಪಂಚಾಯತ್ ರಾಜ್ ವ್ಯವಸ್ಥೆಯ ಹುಟ್ಟು ಮತ್ತು ಬೆಳವಣಿಗೆ ವಿಕೇಂದ್ರೀಕರಣದ ಫಲವೆಂದರೆ ತಪ್ಪಿಲ್ಲ. ವಿಕೇಂದ್ರೀಕರಣ ಎಂಬುದು ಯಾವಾಗಲೂ ಪ್ರಜಾಪ್ರಭುತ್ವದ ಪರವಾಗಿರುತ್ತದೆ. ಅಧಿಕಾರ ಕೇವಲ ಒಬ್ಬ ವ್ಯಕ್ತಿಯಲ್ಲೇ ಇರುವುದಿಲ್ಲ. ಜೊತೆಗೆ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಯಾಗಲು ವಿಕೇಂದ್ರೀಕರಣ ತತ್ವವೇ ಕಾರಣವಾಗಿದೆ. ಇದರಿಂದ ಪಂಚಾಯತಿಗಳು ಜನರ ಸ್ಪಂದನೆಗೆ ಸ್ವಲ್ಪವಾದರೂ ಕೈ ಜೋಡಿಸುತ್ತಿದೆ ಎಂದರೆ ವಿಕೇಂದ್ರೀಕರಣ ಕಾರಣವಾಗಿದೆ. ಒಟ್ಟಾರೆಯಾಗಿ ಗ್ರಾಮೀಣ ಅಭಿವೃದ್ಧಿಯಲ್ಲಿ ವಿಕೇಂದ್ರೀಕರಣ ವ್ಯವಸ್ಥೆಯು ಪ್ರಮುಖ ಪಾತ್ರ ವಹಿಸಿದೆ.

**ಪರಾಮರ್ಶನ ಗ್ರಂಥಗಳು**


- ಭುವನೇಶ್ವರ್ ಪ್ರಸಾದ್. (2002). *ಭಾರತದ ಸಂವಿಧಾನ.* ಸೋಮು ಪ್ರಕಾಶನ
- ಚಂದ್ರಶೇಖರ್. (2010). *ಅಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು. ಉನ್ನತಿ ಪ್ರಕಾಶನ.*
- ದೇಬ್, ಕೆ. (1986). *ರೂರಲ್ ಡೆವಲಪ್ಮೆಂಟ್ ಇನ್ ಇಂಡಿಯಾ ಸಿನ್ಸ್ ಇಂಡಿಪೆಂಡೆನ್ಸ್.* ಸ್ಟರ್ಲಿಂಗ್ ಪಬ್ಲಿಷರ್ಸ್.
- ಕೃಷ್ಣಪ್ಪ, ಬಿ. (2011). *ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು ಮತ್ತು ನೀತಿಗಳು.* ಕನ್ನಡ ಪುಸ್ತಕ ಪ್ರಾಧಿಕಾರ.
- ಲಿಂಗಯ್ಯ ಕರ್ಣಾಟೀ. *(2000). ರೂರಲ್ ಡೆವಲಪ್ಮೆಂಟ್ ಇನ್ ಇಂಡಿಯಾ.* ಕಲ್ಯಾಣಿ ಪಬ್ಲಿಷರ್ಸ್.
- ರೆಡ್ಡಿ, ಕೆ. ವೆಂಕಟ. (1989). *ರೂರಲ್ ಡೆವಲಪ್ಮೆಂಟ್ ಇನ್ ಇಂಡಿಯಾ, ಪಾವರ್ಟಿ ಅಂಡ್ ಡೆವಲಪ್ಮೆಂಟ್.* ಹಿಮಾಲಯ ಪಬ್ಲಿಷಿಂಗ್ ಹೌಸ್.
- ಸುರೇಶ್, ಕೆ.ಎಂ. (2014). *ಗ್ರಾಮ್ ಸ್ವರಾಜ್ಯ ಮತ್ತು ಪಂಚಾಯತ್ ಅಧಿನಿಯಮ–1993.* ಸ್ಪರ್ಧಾ ವಿಜೇತ ಪಬ್ಲಿಕೇಷನ್ಸ್.